OS 68/2015 PW-2

**ದಿನಾಂಕಃ 29.07.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ನನಗೆ ಕನ್ನಡ ಓದಲು , ಬರೆಯಲು ಬರುವುದಿಲ್ಲ. ನನಗೆ ಕನ್ನಡದಲ್ಲಿ ಸಹಿ ಮಾಡಲು ಬರುತ್ತದೆ. ಶಿರಾದಿಂದ ಹನುಮಂತಪುರ 3 ಕಿ.ಮೀ ದೂರವಿದೆ. ಹನುಮಂತಪುರದಲ್ಲಿ ನನಗೆ ಆಸ್ತಿ ಇದೆ. ವಾದಿ ಮತ್ತು ಪ್ರತಿವಾದಿಯ ತಂದೆ-ತಾಯಿ ರಂಗಪ್ಪ ಮತ್ತು ತಿಮ್ಮಕ್ಕ ನನಗೆ ಗೊತ್ತು. 1 ನೇ ಪ್ರತಿವಾದಿ ಹುಚ್ಚಪ್ಪ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. 4 ಮತ್ತು 5 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಜೊತೆ ಅದೇ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಮಕ್ಕಳ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಂಗಪ್ಪನಿಗೆ ಕಲ್ಲುಕೋಟೆಯಲ್ಲಿ 39 ಎಕರೆ 30 ಗುಂಟೆ ಜಮೀನು ಇದೆ. ಸದರಿ ಆಸ್ತಿ ರಂಗಪ್ಪನ ಮಕ್ಕಳು ವಾದಿ ಮತ್ತು ಪ್ರತಿವಾದಿಗಳು ನೋಂದಣಿ ವಿಭಾಗಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದಂತೆ ಒಬ್ಬೊಬ್ಬರಿಗೆ 5-6 ಎಕರೆ ಜಮೀನು ಹೋಗಿರುತ್ತದೆ.

2. ದಾವಾ ಸ್ವತ್ತು ರಂಗಪ್ಪನಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ರಂಗಪ್ಪನ ಮಕ್ಕಳು ಎಲ್ಲರೂ ಸೇರಿ ಕೊಂಡು ಕೊಂಡ ಆಸ್ತಿ ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ಸ್ವತ್ತಿನ ಸ.ನಂ.106/1 ರಲ್ಲಿ ಒಟ್ಟು 6 ಎಕರೆ 6 ಗುಂಟೆ ಇದೆ. ರಂಗಪ್ಪನಿಗೆ ಲಲಿತಮ್ಮ ಎಂಬ ಒಬ್ಬ ಹೆಣ್ಣು ಮಗಳು ಇದ್ದಾಳೆ ಎಂದರೆ ಸರಿ. ಸದರಿ ಲಲಿತಮ್ಮನಿಗೆ 1 ಎಕರೆ ಜಮೀನನ್ನು ತಿಮ್ಮಕ್ಕನವರು ವಿಲ್ ನಾಮೆ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಅದೇ ರೀತಿ ತಿಮ್ಮಕ್ಕನವರು ಪ್ರತಿವಾದಿ 3 ಮತ್ತು 4 ರವರಿಗೂ ವಿಲ್ ನಾಮೆ ಬರೆದುಕೊಟ್ಟಿರುತ್ತಾರೆ ಎಂದರೆ , ಆ ಬಗ್ಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮನೆ ಕಟ್ಟಿಕೊಂಡಿರುವ ಜಮೀನೇ ದಾವಾ ಸ,ನಂ. 106 ಎಂದರೆ ಸರಿ. ಸದರಿ ಜಮೀನಿನಲ್ಲಿ ಅಡಿಕೆ ಗಿಡ ಇದೆ ಎಂದರೆ ಸರಿ. ಸದರಿ ಅಡಿಕೆ ಗಿಡ ಸುಮಾರು 10 ವರ್ಷದ್ದು ಇರಬಹುದು.

3. ದಾವಾ ಸ್ವತ್ತು ರಂಗಪ್ಪ ಮತ್ತು ತಿಮ್ಮಕ್ಕ ನವರಿಗೆ ನೋಂದಣಿ ಪಾಲು ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿ. ಮುಂದುವರೆದು ಸಾಕ್ಷಿಯು ನಾವು ಸತ್ತ ನಂತರ ಎಲ್ಲಾ ಮಕ್ಕಳು ಹಂಚಿಕೊಳ್ಳಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 1990 ರಲ್ಲಿ ವಿಭಾಗ ಆಗುವ ಕಾಲಕ್ಕೆ ಆ ಬಗ್ಗೆ ಹೇಳಿರುತ್ತಾರೆ. ಆ ಮಾತುಕತೆಯಾಗುವ ಕಾಲಕ್ಕೆ ರಂಗಪ್ಪ ಮತ್ತು ತಿಮ್ಮಕ್ಕ ಏನೇನು ದಾಖಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನೇ ಹೇಳಿ ಬರೆಯಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯವರು ತುಂಬಾ ಆತ್ಮೀಯರು ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ರಾಮಲಿಂಗಪ್ಪ ಕರೆದುಕೊಂಡು ಬಂದಿರುತ್ತಾರೆ. ವಾದಿಯವರ ಒತ್ತಾಯಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.